2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.2325/2014
ಸಿಡಬ್ಲ್ಯೂ.02 ಪಿಡಬ್ಲ್ಯೂ.2

ಸಾಕ್ಷಿಯ ಹೆಸರು - ಬಸಪ್ಪ ರಾಮಪ್ಪ ಕುಡ್ಡನ್ನವರ

ವಯಸ್ಸು - 50 ವರ್ಷ

ಉದ್ಯೋಗ - ಕೂಲಿ

ವಾಸ - ಖನಗಾಂವ ಗೋಕಾಕ

ದಿನಾಂಕಃ 25-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದು ಅಪರಾದ ಸ್ಥಳದ ಪಂಚನಾಮೆಯಾಗಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-2 ಅಂತಾ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸುಮಾರು 7 ವರ್ಷಗಳ ಹಿಂದೆ ಸದರಿ ಸಹಿಯನ್ನು ನಾನು ಪೊಲೀಸ ಠಾಣೆಯಲ್ಲಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ನನಗೆ ಚಾಸಾ-1 ಮತ್ತು 3 ಇವರ ಪರಿಚಯ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸ.ಸ.ಅ ಅವರಿಂದಃ-

ದಿಃ7-6-2014 ರಂದು ಗ್ರಾಮೀಣ ಠಾಣೆಯ ಪೊಲೀಸರು ನನ್ನನ್ನು ಪಂಚರನ್ನಾಗಿ ಖನಗಾಂವದಲ್ಲಿರುವ ಆರೋಪಿತರ ಮನೆಯ ಮುಂದೆ ಕರೆಯಿಸಿ ಚಾಸಾ-1 ರವರು ತೋರಿಸಿದ ಅಪರಾಧ ಸ್ಥಳದ ಪಂಚನಾಮೆಯನ್ನು ನನ್ನ ಸಮಕ್ಷಮ ಮುಂಜಾನೆ 10-00 ರಿಂದ 11-00 ಗಂಟೆವರೆಗೆ ಜರುಗಿಸಿ ಸ್ಥಳದಲ್ಲಿ ಪಂಚನಾಮೆ ಬರೆದು ಓದಿ ಹೇಳಿ ನಿಪಿ-1 ಕ್ಕೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ಈಗ ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ , ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.